ಹಿರಿಯ ಸಿವಿಲ್ ನ್ಯಾಯಾಧೀಶರು  ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ತಿ ನರಸೀಪುರ

<u>ಸಿ ಸಿ ಸಂಖ್ಯೆ: 2071/2022</u>

**<u>ದೋಷಾರೋಪಣೆ</u>**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ,  ತಿ ನರಸೀಪುರ  ಆದ ನಾನು

1. ಕೆಂಚ ಉಃ ಧನಗೆರೆ ಉಃ ಮಹದೇವ
   ಬಿನ್ ಸಿದ್ದಯ್ಯ, 39 ವರ್ಷ,
   ವಾಸಃ ಅಲಗೂಡು ಗ್ರಾಮ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

2. ಸಂಜು ಉಃ ಸಂಜಯ್ ಜಿ ಬಿನ್ ಲೇಟ್ ಗೋವಿಂದ,
   28 ವರ್ಷ, ವಾಸಃ ಶ್ರೀರಾಂಪುರ ರಸ್ತೆ,
   ತಿ ನರಸೀಪುರ ಪಟ್ಟಣ.

3. ರಾಕೇಶ್ ಜಿ ಬಿನ್ ಚೆಲುವರಾಜು
   25 ವರ್ಷ, ವಾಸಃ ಶ್ರೀರಾಂಪುರ ರಸ್ತೆ,
   ತಿ ನರಸೀಪುರ ಪಟ್ಟಣ.

4. ಮನು ಎಂ ಬಿನ್ ಮಹದೇವನಾಯಕ
   22 ವರ್ಷ, ವಾಸಃ ಅಲಗೂಡು ಗ್ರಾಮ,
   ತಿ ನರಸೀಪುರ ಪಟ್ಟಣ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೇಃ-

ಮೊದಲನೆಯದಾಗಿ, ದಿಃ 20.06.2022 ರಂದು ರಾತ್ರಿ 7.45 ಗಂಟೆ ಸಮಯದಲ್ಲಿ, ತಿ.ನರಸೀಪುರ ಪೋಲಿಸ್ ಠಾಣಾ ವ್ಯಾಪ್ತಿಯ, ತಿ. ನರಸೀಪುರ ಪಟ್ಟಣ ಲಿಂಕ್ ರಸ್ತೆಯ ತುರುಕನ ಕಟ್ಟೆ ಸಮೀಪ ಇರುವ ಜನಪ್ರಿಯ ಟ್ರೈಡಿಂಗ್ ಹೌಸ್ ಮುಂಭಾಗದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ-2/ಧನಂಜಯ ರವರನ್ನು ಅಡ್ಡ ಗಟ್ಟಿ ಮತ್ತು 3 ಮತ್ತು 4 ನೇ ಆರೋಪಿತರಾದ ನೀವು ಅವರ ಕೈಗಳನ್ನು ಹಿಂದಕ್ಕೆ ತಿರುಗಿಸಿ ಬಲವಾಗಿ ಹಿಡಿದುಕೊಂಡು ಅವರಿಗೆ ಅಕ್ರಮ ತಡೆ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 341 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ, "ಬೋಳಿ ಮಗನೇ, ಸೂಳೆ ಮಗನೇ, ಈಗ ನೀನು ಏನು ಕಿತ್ತುಕೊಳ್ಳುತ್ತೀಯ" ಎಂಬ ಅವಾಚ್ಯ ಶಬ್ದಗಳಿಂದ ಬೈಯ್ದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 2 ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ-2 ರವರ ಕಪಾಲಕ್ಕೆ,

ಮೈಕೈಗೆ ಹೊಡೆದು ಮತ್ತು 3 ನೇ ಆರೋಪಿತರಾದ ನೀವು ಅವರನ್ನು ಕೆಳಕ್ಕೆ ನೂಕಿ ಅವರಿಗೆ ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿತರಾದ ನೀವು ಸೈಜು ಕಲ್ಲಿನಿಂದ ಚಾಸಾ–2 ರವರ ಬಲಕೈಗೆ ಹೊಡೆದು ಅವರಿಗೆ ತೀವ್ರ ಸ್ವರೂಪದ ಗಾಯ ಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 326 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಚಾಸಾ–2 ರವರನ್ನು ಉದ್ದೇಶಿಸಿ, "ನಿನ್ನನ್ನು ಇವತ್ತಾಲ್ಲಾ ನಾಳೆ ಕೊಲೆ ಮಾಡದೆ ಬಿಡುವುದಿಲ್ಲಾ" ಎಂದು ಪ್ರಾಣ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

**ದಿನಾಂಕಃ 19.10.2023** **ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ತಿ ನರಸೀಪುರ**

ಸಿ ಸಿ ಸಂಖ್ಯೆ: **2071/2022**

**ದೋಷಾರೋಪಣೆ**

1. ಕೆಂಚ ಉಃ ಧನಗೆರೆ ಉಃ ಮಹದೇವ
   ಬಿನ್ ಸಿದ್ದಯ್ಯ, 39 ವರ್ಷ,
   ವಾಸಃ ಅಲಗೂಡು ಗ್ರಾಮ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

2. ಸಂಜು ಉಃ ಸಂಜಯ್ ಜಿ ಬಿನ್ ಲೇಟ್ ಗೋವಿಂದ,
   28 ವರ್ಷ, ವಾಸಃ ಶ್ರೀರಾಂಪುರ ರಸ್ತೆ,
   ತಿ ನರಸೀಪುರ ಪಟ್ಟಣ.

3. ರಾಕೇಶ್ ಜಿ ಬಿನ್ ಚೆಲುವರಾಜು
   25 ವರ್ಷ, ವಾಸಃ ಶ್ರೀರಾಂಪುರ ರಸ್ತೆ,
   ತಿ ನರಸೀಪುರ ಪಟ್ಟಣ.

4. ಮನು ಎಂ ಬಿನ್ ಮಹದೇವನಾಯಕ
   22 ವರ್ಷ, ವಾಸಃ ಅಲಗೂಡು ಗ್ರಾಮ,
   ತಿ ನರಸೀಪುರ ಪಟ್ಟಣ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ದ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ದಿನಾಂಕಃ** 19.10.2023

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**